# ಕೇಪ್ ಟೌನ್

# ಸ್ವರ್ಗಭೂಮಿಯೂ... ನರಕ ವಾಸವೂ...

ದಕ್ಷಿಣ ಆಫ್ರಿಕಾದ ಕೇಪ್ ಟೌನ್ ಪ್ರಕೃತಿ ಸೌಂದರ್ಯ–ಸಮೃದ್ಧಿ ಎರಡಕ್ಕೂ ಹೆಸರಾದ ಸ್ಥಳ. ಈ ರಮಣೀಯತೆಯ ಮತ್ತೊಂದು ಮಗ್ಗುಲಲ್ಲಿ ಸ್ಥಳೀಯರ ಸಂಕಟದ ದನಿಗಳೂ ಇವೆ. ಕೇಪ್ ಟೌನ್‌ನ ಹಲವು ಮುಖಗಳನ್ನು ಕಟ್ಟಿಕೊಡುವ ಈ ಪ್ರವಾಸ ಕಥನ, ಜನಸಾಮಾನ್ಯರ ತವಕ ತಲ್ಲಣಗಳು ಎಲ್ಲೆಡೆಯೂ ಒಂದೇ ಎನ್ನುವುದನ್ನು ಸೂಚಿಸುವಂತಿದೆ.

**■ ಹೆಚ್.ಆರ್. ಸುಜಾತಾ**



ನಾವು ಕೇಪ್ ಟೌನನ್ನು ಮುಟ್ಟಿದಾಗ ಮಳೆ, ಮಳೆ, ಮಳೆ...

ಓ... ಏನನ್ನೂ ನೋಡಲಾರೆವಲ್ಲ ಎಂಬ ನಿರಾಸೆ ಮೂಡಿತು. ಹಣ, ಸಮಯ, ಕುತೂಹಲ ಹಾಗೂ ತಾಳ್ಮೆಯನ್ನು ಕೇಳುವ ಪ್ರವಾಸದಲ್ಲಿ ಹವಾಮಾನ ವ್ಯತ್ಯಾಸವಾದಾಗ ಬೇಸರವಾಗುವುದು ಸಹಜ. ಟೇಬಲ್ ಟಾಪ್ ಮೌಂಟೇನ್ ನೋಡದೆ ಹಿಂದಿರುಗಬೇಕಾಗುತ್ತದೇನೋ ಎಂಬ ಹಪಹಪಿಯಲ್ಲೇ ಗೈಡ್ ಹೇಳುವುದನ್ನು ಕೇಳುತ್ತ ನಮ್ಮ ಕಿಟಕಿ ವೀಕ್ಷಣೆ ಶುರುವಾಯಿತು. ಹಳೇ ಕಾಲದ ವಸಾಹತು ನಗರಿಯ ವೈಭವ ಕಣ್ಣಿಗೆ ಕಟ್ಟುವಂತಿತ್ತು. ಹಳೆಯ ವೈಭವದಲ್ಲಿ ಮೆರೆದ ಬಿಳಿಯರು ಸ್ಥಳದ ಕರಿಯ ಜನಾಂಗವನ್ನು ಬಾಯಿಬಿಡದೆ ದುಡಿಯುವ ವರ್ಗವನ್ನಾಗಿ ಮಾಡಿದ ಇತಿಹಾಸ ದಟ್ಟವಾಗಿ ಇಲ್ಲಿ ಕಾಣುತ್ತಿತ್ತು.

ಈ ನಗರದ ಮಧ್ಯದಲ್ಲಿ, ಬಣ್ಣಬಣ್ಣದ ವಸತಿಗಳನ್ನು ಅಂದಿನ ವಿವಿಧ ದೇಶದ ವಲಸೆಗಾರರ ಸಂಕೇತವಾಗಿ ಉಳಿಸಿಕೊಂಡು ಬಂದಿದ್ದಾರೆ. ಇಲ್ಲಿಯ ನೀಟಾದ ರಸ್ತೆಗಳು, ಬೆಡಗಿನ ಐಷಾರಾಮಿ ಬಡಾವಣೆಗಳ ವೈಭವ ನಮ್ಮ ಹಿಂದಿ ಸಿನಿಮಾ ಜಗತ್ತನ್ನು ಒಳಪಡಿಸಿದಂತೆ, ಎಲ್ಲ ದೇಶದ ಸಿನಿಮಾದವರನ್ನು ತನ್ನೆಡೆಗೆ ಸೆಳೆಯುತ್ತದೆ.

ಆದರೆ ಆ ಮಳೆಯಲ್ಲಿ ಅಬ್ಬೇಪಾರಿಗಳಂತೆ ಮುಚ್ಚಿದ ಅಂಗಡಿ ಮುಂಗಟ್ಟಿನ ಮುಂದೆ ನಿಂತಿದ್ದವರು ಸ್ಥಳೀಯ ಕಪ್ಪು ಜನರು ಮಾತ್ರ. 'ಕತ್ತಲಾದ ಮೇಲೆ ಓಡಾಡದಿರಿ' ಎಂದು ಅವರನ್ನು ನೋಡಿ ಎಚ್ಚರಿಕೆಯ ಕರೆ ನೀಡುವವರು, ಹಿಂದೆ ಇಲ್ಲಿಗೆ ಹೊಟ್ಟೆಪಾಡಿಗಾಗಿ ಬಂದು ಇಲ್ಲೇ ಉಳಿದು ಹೋಗಿರುವ ಬ್ರೌನ್ ಜನರು. ಇತರೆ ದೇಶದ ವಲಸಿಗರಾದ ಬ್ರೌನ್ ಜನಾಂಗದವರು ಈಗ ಸಣ್ಣ ವ್ಯಾಪಾರ, ಅಂಗಡಿ ಮುಂಗಟ್ಟು ಹಾಗೂ ಗೈಡ್, ಟ್ಯಾಕ್ಸಿ – ಇಂಥ ಕೆಲಸಗಳನ್ನು ನಂಬಿದ್ದಾರೆ. ಬಂದ ಅತಿಥಿಗಳನ್ನು ಮನ ತಣಿಸುವ ಕಾಯಕ ಇವರದ್ದು.

ಅಗಾಧ ವನಸಿರಿ, ಸಮೃದ್ಧ ನೀರು, ಹಚ್ಚಹಸುರು ಹೊದ್ದ ಪರ್ವತಗಳ ಈ ಸುಂದರ ನಗರಿಯಲ್ಲಿ ಎತ್ತ ನೋಡಿದರೂ ಪ್ರವಾಸಿಗರು! ಎಲ್ಲಿ ನೋಡಿದರಲ್ಲಿ ಟೂರಿಸಂಗೆ ಹೊಂದಿಕೊಂಡ ಬದುಕು! ಇಲ್ಲಿನ ಏರ್‌ಪೋರ್ಟಿನ ಹಾಗೂ ಹೋಟೆಲ್ಲಿನ ರಿಸೆಪ್ಷನ್ ಕೌಂಟರ್‌ನಲ್ಲಿ ಮಾತ್ರ ಕಪ್ಪು ಜನಾಂಗದವರು ಶಿಸ್ತಾಗಿ ಕೆಲಸದಲ್ಲಿರುತ್ತಾರೆ. ರಸ್ತೆಗಳಿಂದ ಟಾಯ್ಲೆಟ್ಟಿನವರೆಗೂ ಸಂಪೂರ್ಣ ಕ್ಲೀನಿಂಗ್ ಕೆಲಸ ಮಾಡುವವರು ಸ್ಥಳೀಯ ಕಪ್ಪು ಜನರೇ.

## ಚರಿತ್ರೆಯ ಕಗ್ಗತ್ತಲ 'ಸ್ಲೇವ್ ಲಾಡ್ಜ್'

ಮಳೆಯ ಕಾರಣದಿಂದ ಒಂದು ಮ್ಯೂಸಿಯಂ ನೋಡಿಕೊಂಡು, ಮತ್ತೊಂದು 'ಸ್ಲೇವ್ ಲಾಡ್ಜ್' ಹೆಸರಿನ ಮ್ಯೂಸಿಯಂ ನೋಡಲು ಒಳ ಹೊಕ್ಕೆವು. ಇದೊಂದು ಕ್ರೂರ ಇತಿಹಾಸದ ಕಗ್ಗತ್ತಲ ಮ್ಯೂಸಿಯಂ. ಇದು ಕೇಪ್ ಟೌನಿನ ಎರಡನೇ ಪುರಾತನ ಕಟ್ಟಡ. ನಿರ್ಗತಿಕ ಕೂಲಿಗಳಿಗೆ ಅಲ್ಲಿ ಇಲ್ಲಿ ವಸತಿ ಕಲ್ಪಿಸಿ ಕೊನೆಗೆ ಇದು ಅವರ ವಸತಿಯಾಗಿದೆ. 1966ರ ಕೊನೆಗೆ 'ಸ್ಲೇವ್ ಲಾಡ್ಜ್ ಮ್ಯೂಸಿಯಂ' ಆಗಿದೆ. ಕರಾಳ ಇತಿಹಾಸ ಹೇಳುವ ವಿವರದೊಂದಿಗೆ, ಆಫ್ರಿಕಾದ ಮೂಲ ಕಲೆ, ಇತ್ತೀಚಿನ ಎಲ್ಲ ಕಲಾವಿದರ ಅಭಿಪ್ರಾಯ ಹಾಗೂ ಮಾನವ ಘನತೆಯ ಸ್ವಾತಂತ್ರ್ಯದ ಅಭಿವ್ಯಕ್ತಿಯನ್ನು ಬಿಂಬಿಸುವ ಕಲಾಕೇಂದ್ರವನ್ನಾಗಿ ಕೂಡ ರೂಪಿಸಿದ್ದಾರೆ.

